ಅವರಿಗೆ ಎಲ್ಲಾ ಸರ್ಟಿಫಿಕೇಟುಗಳು ಅವರ ಹತ್ತಿರ ಭದ್ರವಾಗಿ ಇಟ್ಟುಕೊಂಡಿದ್ದಾರೆ. ಅವರೇ 10ನೇ ತಾರೀಖಿಗೆ ಅಪ್ಲಿಕೇಷನ್ ಹಾಕಬೇಕಾಗಿರತಕ್ಕಂಥಾದ್ದು. ಇದರ ಬಗ್ಗೆ ವಿಮರ್ಶೆ ಮಾಡಿ ನೋಡಿ ಹೇಳುತ್ತೇನೆ.

ನಿಯಮ 351ರ ಅಡಿಯಲ್ಲಿನ ಸೂಚನೆಗಳು

ಬಾದಾಮಿ ಮತ್ತು ಗುಳೇದ ಗುಡ್ಡದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರತಕ್ಕ ವೈದ್ಯಾಧಿಕಾರಿಗಳ ಹುದ್ದೆ ಭರ್ತಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ವಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನ ಬಾದಾಮಿ ಮತ್ತು ಗುಳೇದಗುಡ್ಡ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಇತರ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳಿಗೆ ಮಂಜೂರಾದ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಹುದ್ದೆಗಳಿಗೆ ಇಂದಿಗೂ ಭರ್ತಿ ಮಾಡದೇ ರೋಗಿಗಳಿಗೆ ತುಂಬಾ ದೈಹಿಕ ಮತ್ತು ಮಾನಸಿಕ ತೊಂದರೆಯಾಗಿರುವುದರಿಂದ ತೊಂದರೆಯಿಂದ ಬಳಲುವ ಪರಿಸ್ಥಿತಿ ಉದ್ಭವಿಸಿದೆ. ರೋಗ ನಿಯಂತ್ರಣಕ್ಕಾಗಿ ವೈದ್ಯರ ಮತ್ತು ತಜ್ಞ ವೈದ್ಯರ ಸಲಹೆಗಾಗಿ ದೂರ ಸ್ಥಳಗಳಾದ ಬಾಗಲಕೋಟೆ, ಗದಗ್, ಹುಬ್ಬಳ್ಳಿಗೆ ಹೋಗುವ ಪರಿಸ್ಥಿತಿ ತಲೆದೋರಿದೆ. ಸಾಮಾನ್ಯ ಕೂಲಿಕಾರರು, ರೈತರು, ಶಿಕ್ಷಕರು, ಈ ಸ್ಥಳಗಳಿಗೆ ಹೋಗಿ ಶುಶ್ರೂಷೆ, ಚಿಕಿತ್ಸೆ ಪಡೆಯುವ ಶಕ್ತಿ ಇಲ್ಲವೇ ಇಲ್ಲ. ಆಸ್ಪತ್ರೆಗಳಲ್ಲಿ ಔಷಧ ಇದ್ದರೂ, ವೈದ್ಯರು ಮತ್ತು ಅವರ ಸಹಾಯಕ ಸಿಬ್ಬಂದಿ ಇರದಿರುವುದರಿಂದ ಬಳಕೆಯಾಗದೇ ಅನುಪಯುಕ್ತ ಆಗುವ ಸಂದರ್ಭ ಒದಗಿದೆ. ಆದ್ದರಿಂದ ಸರ್ಕಾರ ಆದಷ್ಟು ತೀವ್ರವೇ ಖಾಲಿ ಇರುವ ವೈದ್ಯರ ಮತ್ತು ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ತುರ್ತು ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ದೆಹಲಿಯಲ್ಲಿ ಆರೋಗ್ಯ ಮಂತ್ರಿಗಳ ಕಾರ್ಯಕ್ರಮದಲ್ಲಿ ಪಾಲುಗೊಳ್ಳುವುದಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಸಮುದಾಯ ಆರೋಗ್ಯ ಕೇಂದ್ರ, ಬಾದಾಮಿ, ಇಲ್ಲಿ ನಾಲ್ಕು ಜನ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ॥ ಶ್ರೀ ಶೈಲಪ್ಪ, ಡಾ॥ ಸಾಳಗುಂದಿ, ಡಾ॥ ಕೋತಡ್ಡಿ, ಡಾ॥ ಮುಜುಂದಾರ) ಸದರಿ ಆಸ್ಪತ್ರೆಯಲ್ಲಿ ಪ್ರಯೋಗ ಶಾಲಾ ತಂತ್ರಜ್ಞ, ಫಾರ್ಮಾಸಿಸ್ಟ್ ನೇತ್ರ ಸಹಾಯಕ ಹುದ್ದೆಗಳು ಖಾಲಿಯಿರುವುದಲ್ಲದೇ ಕಿರಿಯ ಆರೋಗ್ಯ ಸಹಾಯಕ (13), ಕಿರಿಯ ಆರೋಗ್ಯ ಸಹಾಯಕಿ (5), ಪ್ರಥಮ ದರ್ಜೆ ಸಹಾಯಕ (5) ಮತ್ತು ಡಿ-ಪಂಗಡ(17) ಹುದ್ದೆಗಳು ಖಾಲಿಯಿರುತ್ತವೆ.

ಸಾರ್ವಜನಿಕ ಆಸ್ಪತ್ರೆ, ಗುಳೇದಗುಡ್ಡ ಇಲ್ಲಿ ಮೂರು ಮಂದಿ ವೈದ್ಯರು ಕೆಲಸ ಮಾಡುತ್ತಿದ್ದಾರೆ. (ಡಾ॥ ಪಟ್ಟಣ, ಡಾ॥ (ಶ್ರೀಮತಿ) ಟೆಲಸಂಗ, ಮತ್ತು ಡಾ॥ ಬ್ಯಾಕೋಡ್).

ಬಾದಾಮಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ಪೈಕಿ ಕೆಲವು ಸಂಸ್ಥೆಗಳಲ್ಲಿ ವೈದ್ಯರು, ಹಿರಿಯ ಆರೋಗ್ಯ ಸಹಾಯಕ, ಕಿರಿಯ ಆರೋಗ್ಯ ಸಹಾಯಕ, ಪ್ರಯೋಗ ಶಾಲಾ ತಂತ್ರಜ್ಞ ಹುದ್ದೆಗಳು ಖಾಲಿ ಇರುತ್ತವೆ.

ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆಗೆ ಆಧಾರದ ವೈದ್ಯರನ್ನು ನೇಮಿಸುವ ಮೂಲಕ, ಸ್ನಾತಕೋತ್ತರ ವ್ಯಾಸಂಗದಿಂದ ಹಿಂದಿರುಗುವ ವೈದ್ಯರನ್ನು ನೇಮಿಸುವ ಮೂಲಕ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡುವ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿರುತ್ತದೆ.

ಕಿರಿಯ ಆರೋಗ್ಯ ಸಹಾಯಕ:ಸಹಾಯಕಿ, ಪ್ರಥಮ ದರ್ಜೆ ಹುದ್ದೆ ಹಾಗೂ ಇತರೆ ವರ್ಗದ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯು ಈಗಾಗಲೇ ಆರ್ಥಿಕ ನಿರ್ಬಂಧ ಸಡಿಲಗೊಳಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ನೇಮಕಾತಿಗೆ ಮೀಸಲಾತಿಯ ಆದೇಶವನ್ನು ಇತ್ತೀಚೆಗೆ ಹೊರಡಿಸಲಾಗಿದ್ದು, ಈ ಉಳಿದ ಸಿಬ್ಬಂದಿಯ ಹುದ್ದೆಗಳನ್ನು ತುಂಬಲು ಆದಷ್ಟು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

(2) ದ.ಕ. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಭರ್ತಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ವರ್ಗಾವಣೆಯಿಂದ ಖಾಲಿ ಆಗಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆ ಹಾಗೂ ಖಾಲಿ ಆಗಿರುವ ಉಡುಪಿ ತಾಲ್ಲೂಕು ಪಂಚಾಯಿತಿ ಸಹಿತ ಇತರ ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡದೇ ದೈನಂದಿನ ಅಭಿವೃದ್ಧಿ ಕಾರ್ಯಗಳಿಗೆ ತೊಡಕು ಉಂಟಾಗಿದೆ. ಸರ್ಕಾರ ಈ ಬಗ್ಗೆ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಹುದ್ದೆಯು ಐಎಎಸ್ ವರ್ಗದ ಹುದ್ದೆಯಾಗಿದ್ದು, ಈ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಕ್ರಮ ಕೈಗೊಳ್ಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 8 ತಾಲ್ಲೂಕು ಪಂಚಾಯಿತಿಗಳಿದ್ದು, ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೆ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ನೇಮಕ ಮಾಡಿ ಈಗಾಗಲೇ ಆದೇಶ ಹೊರಡಿಸಲಾಗಿದೆ. ನೇಮಿಸಿರುವ ಸ್ಥಳಗಳಿಗೆ ಕೆಲವು ಅಧಿಕಾರಿಗಳು ಈಗಾಗಲೇ ಹಾಜರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನೇಮಿಸಿದ ಸ್ಥಳಕ್ಕೆ ಹಾಜರಾಗದೇ ಇರುವ ಅಧಿಕಾರಿಗಳಿಗೆ ಕೂಡಲೇ ಹಾಜರಾಗಲು ಸೂಚನೆಯನ್ನು ನೀಡಲಾಗಿದೆ. ಗೈರು ಹಾಜರಾದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆಂದು ಈ ದಿನವೇ ಎಚ್ಚರಿಕೆ ನೋಟೀಸನ್ನು ಕೊಡಲಾಗಿದೆ.

ಅಧ್ಯಕ್ಷರು : ಅರಗ ಜ್ಞಾನೇಂದ್ರ ಅವರ ಸೂಚನೆಯನ್ನು ಬಾಲಕೃಷ್ಣ ಅವರು ಕೇಳುತ್ತಾರೆ.

(ii) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ವಿದ್ಯುತ್ ಇಲಾಖೆಯ ಎಂಆರ್‌ಎಸ್‌ನಿಂದ ತೀರ್ಥಹಳ್ಳಿ ತಾಲ್ಲೂಕಿನ ಮಂದಗದ್ದೆವರೆಗೆ ಸುಮಾರು 35 ಕಿ.ಮೀ. 11 ಕೆ.ವಿ.ಎ. ಲೈನ್ ಎಳೆದು ಸುಮಾರು 20 ವರ್ಷಗಳಾಗಿದೆ. ಇದುವರೆಗೂ ಇದರಿಂದ ವಿದ್ಯುತ್ ಸರಬರಾಜು ಮಾಡಿಲ್ಲ. ಬಳಕೆದಾರನಿಗೆ ಕೊಡಲು ಸಾಧ್ಯವಾಗದೇ ಇಲಾಖೆಯ ತಂತಿ ಮತ್ತು ಅವರ ಬೆಲೆ ಬಾಳುವ ವಸ್ತುಗಳು ಕಳ್ಳತನವಾಗಿ ಇಲಾಖೆಗೆ ಅಪಾರ ನಷ್ಟ ಸಂಭವಿಸಿರುತ್ತದೆ. ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದಾಗ್ಯೂ ಉಳಿಸಲು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ರೀತಿ ಸಾರ್ವಜನಿಕ ಹಣ ನಷ್ಟ ಮಾಡಿದ ಸಂಬಂಧಿಸಿದ